ಬೈಲಹೊಂಗಲ ತಾಲ್ಲೂಕಿನ ವಿದ್ಯುತ್ ಮಗ್ಗಗಳ ನೇಕಾರರಿಗೆ ಆರ್ಥಿಕ ಸಹಾಯ

133-ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ನೇಕಾರರು ಪವರ್‌ಲೂಮ್ ಮಗ್ಗಗಳನ್ನು ಹಾಕಿಕೊಂಡಿದ್ದು, ಆರ್ಥಿಕ ತೊಂದರೆ ಅನುಭವಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕೆ.ಎಸ್.ಎಫ್.ಸಿ.ಯವರು ಪವರ್‌ಲೂಮ್ ಮಗ್ಗದವರಿಗೆ ಆರ್ಥಿಕ ಸಹಾಯ ಮಾಡಲು ಹಿಂಜರಿಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರದವರು ಪವರ್‌ಲೂಮ್ ಮಗ್ಗದವರಿಗೆ ಪವರ್‌ಲೂಮ್ ಹಾಕಲು ಆರ್ಥಿಕವಾಗಿ ಎಲ್ಲಾ ರೀತಿಯ ಸಹಾಯವನ್ನು ಮಾಡುವರೇ?

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) ;

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಬಂದಿದೆ.

ಇ) ಈ ಬಗ್ಗೆ ಕೆ.ಎಸ್.ಎಫ್.ಸಿ.ರವರೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಶಿವಾನಂದ ಹೆಚ್.ಕೌಜಲಗಿ: ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯಲ್ಲಿ ನಿರುದ್ಯೋಗಿ ಜನರಿಗೆ ಪವರಲೂಮ್ ಸಲುವಾಗಿ ಕೆ.ಎಸ್.ಎಫ್.ಸಿ. ಯಾವುದೇ ಸಾಲ ಕೊಟ್ಟಿಲ್ಲ ಹಾಗೂ ಈ ಜನರಿಗೆ ತೊಂದರೆಯಾಗಿರುವುದರಿಂದ ತಮ್ಮ ಇಲಾಖೆಯಿಂದ ಯಾವ ರೀತಿ ಇದನ್ನು ಸರಿಪಡಿಸುತ್ತೀರೆಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ ಬೈಲಹೊಂಗಲದ ನೇಕಾರರು ಪವರ್‌ಲೂಮ್‌ಗಳನ್ನು ಹಾಕಿಕೊಂಡಿದ್ದು, ಅವರು ಆರ್ಥಿಕ ತೊಂದರೆ ಅನುಭವಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಕೆ.ಎಸ್.ಎಫ್.ಸಿ. ಯವರು ಪವರ್‌ಲೂಮ್ ಹಾಕಿಕೊಂಡವರಿಗೆ ಆರ್ಥಿಕ ಸಹಾಯ ಮಾಡಲು ಹಿಂಜರಿಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಗಮನಕ್ಕೆ ಬಂದಿದ್ದರೆ ಸರ್ಕಾರದವರು ನಿರ್ದಿಷ್ಟವಾಗಿ ಕೆ.ಎಸ್.ಎಫ್.ಸಿ. ಯವರನ್ನು ಕರೆಸಿ ಅವರಿಗೆ ಸಾಲ ಸಿಗುವಂತೆ ಯಾವ ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದು ಒಂದನೆಯದು. ಎರಡನೆಯದಾಗಿ ಕಳೆದ 6 ತಿಂಗಳುಗಳಿಂದ ಅವರೆಲ್ಲಾ ಪವರ್‌ಪ್ಲೂಲೂಂಗಳನ್ನು ತರಿಸಿಕೊಂಡಿದ್ದಾರೆ. ಈಗ ಅವರಿಗೆ ಬಡ್ಡಿ ಬೀಳುತ್ತಿದೆ. ಡಿಪಾರ್ಟ್‌ಮೆಂಟ್‌ನಿಂದ ಅವರಿಗೆ ಆರ್ಡರ್ ಬಂದಿದೆ. ಈಗಾಗಲೇ ಅವರು ಬಡ್ಡಿಯನ್ನು ಕಟ್ಟುವಂತಹ ಪ್ರಸಂಗ ಬಂದಿದೆ. ಇದಕ್ಕೆ ಯಾರು ಹೊಣೆಗಾರರು? ಒಂದು ವೇಳೆ ಕೆ.ಎಸ್.ಎಫ್.ಸಿ. ಕೊಡದಿದ್ದರೆ ನೀವು ಬೇರೆಯವರಿಂದ ಯಾವಾಗ ಮಾಡಿಸಿ ಕೊಡುತ್ತೀರಿ ಎಂದು ತಮ್ಮನ್ನು ಕೇಳುತ್ತೇನೆ. ತಾವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಜವಳಿ ನೀತಿಯನ್ನು ತಂದಿದ್ದೀರಿ. ಆದರೆ ತಾವು ತಂದಿರುವಂತಹ ಜವಳಿ ನೀತಿಯನ್ನು ಈ ಡಿಪಾರ್ಟ್‌ಮೆಂಟ್‌ನವರು ಕಾರ್ಯಗತವಾಗದಂತೆ ಮಾಡುತ್ತಿದ್ದಾರೆ. ಅದಕ್ಕೋಸ್ಕರ ತಾವು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಬೆಳಗಾಂ ಜಿಲ್ಲೆ ಸಾಕಷ್ಟು ಪವರ್‌ಪ್ಲೂಮ್ ಉದ್ಯಮಗಳನ್ನು ಹಾಕುವುದಕ್ಕೆ ಉತ್ತಮ ಕೇಂದ್ರವಾಗಿದೆ. ಮಹಾರಾಷ್ಟ್ರ ಮತ್ತು ಚಿಲಕ್ರಂಜಿ ಇನ್ನಿತರ ಕೇಂದ್ರಗಳಿಂದ ಬಂದಿರುವಂತಹ ಸ್ಫೂರ್ತಿಯಿಂದಾಗಿ ಬೆಳಗಾಂನಲ್ಲೂ ವಿಶೇಷವಾಗಿ ಬೈಲಹೊಂಗಲದಲ್ಲಿ ಪವರ್‌ಲೂಮ್ಮಗಳನ್ನು ನಾವು ಹೆಚ್ಚು ಹಾಕಬೇಕೆಂದು ಪ್ರಯತ್ನ ಮಾಡಿದಾಗ ಸಾಕಷ್ಟು ಉದ್ಯಮಶೀಲರು

ಮುಂದೆ ಬಂದಿದ್ದು ನಿಜ. ಕರ್ನಾಟಕ ಸರ್ಕಾರದವರು ಹೊಸ ಜವಳಿ ನೀತಿಯನ್ನು ತಂದ ಮೇಲೆ ಪವರ್‌ಲೂಮ್ ಡೆವಲಪ್‌ಮೆಂಟ್ ಸಲುವಾಗಿ ವಿದ್ಯುತ್ ಮಗ್ಗಗಳ ಅಭಿವೃದ್ಧಿಯ ಸಲುವಾಗಿ ಒಂದು ನಿಗಮವನ್ನು ಸ್ಥಾಪನೆ ಮಾಡಬೇಕೆಂದು ಪವರ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸ್ಥಾಪನೆ ಮಾಡಬೇಕೆನ್ನುವ ದೃಷ್ಟಿಯಿಂದ ಹೊಸ ಹೆಜ್ಜೆಯಿಟ್ಟಾಗ ಕೆ.ಎಸ್.ಟಿ.ಪಿ.ಎಲ್. ಅವರು ವಿಶ್ವಯೋಜನೆಯಡಿ ಇದ್ದಂತಹ ಉದ್ಯಮಶೀಲರಿಗೆ ನೂಲನ್ನು ಕೊಡತಕ್ಕಂಥದ್ದನ್ನು ಮತ್ತು ಮಾರಾಟದ ವ್ಯವಸ್ಥೆಯನ್ನು ಮಾಡುವ ಭರವಸೆಯನ್ನು ಕೊಟ್ಟರು.

10.00 ಎ.ಎಂ.

ಪವರ್‌ಲೂಂ ಡೆವಲಪ್ಮೆಂಟ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬರುವ ಕಾರಣ ಕೆಪೆಚ್ಡಿಸಿ ಆ ಒಂದು ಚಟುವಟಿಕೆಯನ್ನು ಕಡಿಮೆಗೊಳಿಸಬೇಕು ಎನ್ನುವ ನಿರ್ಣಯ ಆದಮೇಲೆ ಕೆಎಸ್‌ಎಫ್ಸಿಯವರು ತಕ್ಷಣ ಸಾಲ ಮಂಜೂರು ಮಾಡುವುದನ್ನು ನಿಧಾನಗೊಳಿಸಿದರು. ಸುದೈವದಿಂದ ಮಾನ್ಯ ಶಿವಾನಂದ ಕೌಜಲಗಿಯವರಿಗೆ ಸಂತೋಷವಾಗುತ್ತದೆ. ಈ ಸದನಕ್ಕೆ ನಾನು ಆ ಒಂದು ಪ್ರಸ್ತಾಪವನ್ನು ಸಲ್ಲಿಸುವುದಕ್ಕೆ ಇಚ್ಛಿಪಡುತ್ತೇನೆ. ಕರ್ನಾಟಕ ಸರ್ಕಾರದ ವಿದ್ಯುತ್ ಮಗ್ಗಗಳ ನಿಗಮ 9-2-93ರಿಂದ ಅಸ್ತಿತ್ವಕ್ಕೆ ಬಂದಿದೆ. ಅದು 9-2-93ರಂದು ಕಂಪನಿ ರಿಜಿಸ್ಟ್ರಾರ್‌ರಿಂದ ರಿಜಿಸ್ಟ್ರಾಗಿದೆ. ಆದುದರಿಂದ ತನ್ನ ಕೆಲಸವನ್ನು ಸಹ ತಕ್ಷಣ ಪ್ರಾರಂಭಗೊಳಿಸುತ್ತದೆ. ಆ ಒಂದು ಕಾರ್ಪೊರೇಷನ್ ಕೆಲಸವನ್ನು ಪ್ರಾರಂಭ ಮಾಡಿದಮೇಲೆ ಬಹುಶಃ ಈ ಒಂದು ಸಮಸ್ಯೆ ಏನು ಇದೆ, ಅದು ಇರುವುದಿಲ್ಲ. ಈ ಉದ್ಯಮವನ್ನು ಬೆಳೆಸುವುದಕ್ಕೆ ಹಾಗೂ ಈ ಉದ್ಯಮವನ್ನು ಯಾರು ಕೈಗೆತ್ತಿಕೊಳ್ಳುತ್ತಾರೆ ಅವರಿಗೆ ಹಣಕಾಸು ಲಭ್ಯಮಾಡುವುದಾಗಲಿ, ಇತರ ತಾಂತ್ರಿಕ ವ್ಯವಸ್ಥೆ ಮಾಡುವುದಾಗಲಿ, ಸರ್ಕಾರಕ್ಕೆ ಹೆಚ್ಚು ಅನುಕೂಲ ಆಗುತ್ತದೆ. ಬಹುಶಃ ಬರುವ ದಿವಸಗಳಲ್ಲಿ ಬೆಳಗಾಂನಲ್ಲಿ ವಿದ್ಯುತ್ ಮಗ್ಗಗಳ ಸಂಖ್ಯೆ ಬೆಳೆಸುವುದಕ್ಕೆ ಹಾಗೂ ಅಭಿವೃದ್ಧಿ ಪಡಿಸುವುದಕ್ಕೆ ಈ ಕಾರ್ಪೊರೇಷನ್ ಮುಖಾಂತರ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುತ್ತದೆ. ಈಗ ಸದ್ಯಕ್ಕೆ ತಮ್ಮ ಗಮನಕ್ಕೆ ಬಂದಿರುವಂತೆ ಕೆಎಸ್‌ಎಫ್ಸಿ ಮಂಜೂರಾತಿ ನಿಧಾನವಾಗಿದೆ. ತಕ್ಷಣ ಆ ಹಣ ಬಿಡುಗಡೆ ಮಾಡುವಂತಹ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ತಾವು ವಿಶ್ವ ಯೋಜನೆ ಒಳಗಡೆ ಇದನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ. ನಾವು ಕೆಎಸ್‌ಎಫ್‌ಸಿಯವರನ್ನು ಕೇಳಿದರೆ ಅವರು ಬಂಗಾರಪ್ಪನವರ ಹಿಂದೆಯೇ ಈ ವಿಶ್ವ ಯೋಜನೆ ಹೋಗಿದೆ ಎಂದು ಹೇಳುತ್ತಾರೆ. ಎರಡನೆಯದು ನಾವು ಈಗಾಗಲೇ ಅರ್ಜಿ ಕೊಟ್ಟಿದ್ದೇವೆ. ಕೆಎಸ್‌ಎಫ್ಸಿಯವರನ್ನು ಒಟ್ಟು 16ಮಂದಿಗೆ ನಾವು ಎಷ್ಟು ಲೋನ್ ಕೇಳುತ್ತಿದ್ದೇವೆ ಎಂದರೆ 8 ಲಕ್ಷ ರೂಪಾಯಿಗಳನ್ನು ಮಾತ್ರ. ಆದರೆ ಈ 8 ಲಕ್ಷ ರೂಪಾಯಿ ಕೂಡ ಸಿಗುವುದಿಲ್ಲ. ಮತ್ತೆ ಅರ್ಜಿ ಹೇಗೆ ತೆಗೆದುಕೊಳ್ಳುತ್ತಾರೆ ಎಂದರೆ, ಅದನ್ನು ತೆಗೆದುಕೊಳ್ಳಬೇಕಾದರೆ ಬೈಲಹೊಂಗಲ ತಾಲ್ಲೂಕಿನಲ್ಲಿ ಇದ್ದಂತಹ ಎಲ್ಲಾ ಬ್ಯಾಂಕ್ಗಳ ಕಡೆಯವರಿಂದೇ ನಾವು ಸರ್ಟಿಫಿಕೇಟ್ ತೆಗೆದುಕೊಂಡು ಹೋಗಬೇಕು. ಇಲ್ಲದಿದ್ದರೆ ಇವರು ಸಲ ಇಲ್ಲ ಎನ್ನುತ್ತಾರೆ. ಇವರು 50 ಸಾವಿರ ರೂಪಾಯಿ ಸಾಲ ಕೊಡಬೇಕಾದರೆ ಬೈಲ ಹೊಂಗಲ ತಾಲ್ಲೂಕಿನಲ್ಲಿರುವ ಎಲ್ಲಾ ಬ್ಯಾಂಕಿನವರ ಕಡೆಯಿಂದ ನಿಲ್ ಸರ್ಟಿಫಿಕೇಟ್ ತೆಗೆದುಕೊಂಡು ಹೋಗಬೇಕು. ನಿಲ್ ಸರ್ಟಿಫಿಕೇಟ್ ಹೋದನಂತರ ಕೆಎಸ್‌ಎಫ್ಸಿಯವರು ಕೊಡುತ್ತಾರೆ. ಮತ್ತೆ ಕೆಎಸ್‌ಎಫ್ಸಿಯವರ ಕಡೆಯಿಂದ 50 ಮಂದಿಗೆ ನಾನೇ ಸಾಲ ಕೊಡಿಸಿದ್ದೇನೆ.

ಇವತ್ತಿನ ತನಕ ನೂರಕ್ಕೆ ನೂರು ಪೇಮೆಂಟ್ ಕೊಡಿಸಿದ್ದೇವೆ. ನೀವು ಪವರ್ಲೂಮ್ ಅವರನ್ನು ಕೇಳಿರಿ. ಕೆಎಸ್ಎಫ್ಸಿಯವರನ್ನು ಕರೆಸಿ ಕೇಳಿಬೇಕಿದ್ದರೆ; ನೂರಕ್ಕೆ ನೂರರಷ್ಟು ಪೇಮೆಂಟ್ ಕೊಡಿಸಿದ್ದರೂ ಸಹ ಈಗಿನ ಅಧಿಕಾರಿಗಳು ಆಲ್ಲಿ ಯಾವುದೇ ಸಾಲ ಕೊಡುವುದಕ್ಕೆ ತಯಾರಿಲ್ಲ. ಬರೀ ಬೆಳಗಾಂ ಒಳಗೆ ವ್ಯವಹಾರ ಮಾಡುವುದಕ್ಕೆ ಹೊರಟಿದ್ದಾರೆ. ಮೊನ್ನೆ ದಿವಸ ನಮ್ಮ ಜಿಲ್ಲಾ ಮಂತ್ರಿಗಳ ಸಮ್ಮುಖದಲ್ಲಿ ನಡೆದಂತಹ ಮೀಟಿಂಗ್ನಲ್ಲಿ ಈ ಬಗ್ಗೆ ನಿರ್ಣಯ ಸಹ ಆಯಿತು. ಈಗಿನ ಕೆಎಸ್ಎಫ್ಸಿ ಅಧಿಕಾರಿಗಳು ಬಹಳ ತೊಂದರೆ ಕೊಡುವುದಕ್ಕೆ ಹೊರಟಿದ್ದಾರೆ, ಇದರ ಬಗ್ಗೆ ಚರ್ಚೆ ಮಾಡಬೇಕು ಎಂದು ಹೇಳಿ ತಿಳಿಸಿರುತ್ತಾರೆ. ಮಾನ್ಯ ಓಂ ಪ್ರಕಾಶ ಕಣಗಲಿ ಅವರ ಅಧ್ಯಕ್ಷತೆಯಲ್ಲಿ ನಡೆದಂತಹ ಮೀಟಿಂಗ್ನಲ್ಲಿ ಈ ರೀತಿ ಹೇಳಿದ್ದಾರೆ. ಮುಂದಿನ ಮೀಟಿಂಗ್ನಲ್ಲಿ ನೀವು ಸಹ ಬರುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ಇದು ಒಂದು ಹೊಸ ಸುದ್ದಿ, ಮುಂದಿನ ಸಭೆಗೆ ನೀವು ಬರುತ್ತೀರಿ ಎಂದರೆ ವಿನರ್ಥ. ಈಗ ತಾವು ಅಧ್ಯಕ್ಷರಾಗಿದ್ದೀರಿ. ಈ ಜಿಲ್ಲೆಯ ಮುಂದಿನ ಸಭೆಗೆ ತಾವು ಬರುತ್ತೀರಿ ಎಂದರೆ ನಮಗೆ ವಿನೋ ಒಂದು ಅರ್ಥ ಕಾಣುತ್ತದೆ. ಈಗ ಹೊಸ ಸುದ್ದಿ ಸಭೆಯ ಗಮನಕ್ಕೆ ಬಂದುಬಿಟ್ಟಿತು. ಇದು ಬರದೇ ಇದ್ದರೆ ನಾವು ಹೇಗೋ ಗೌಪ್ಯವಾಗಿ 4 ಗೋಡೆ ಒಳಗಡೆ ಇರುತ್ತಿದ್ದೆವು. ಮುಂದಿನ ಸಭೆಗೆ ನೀವು ಬರುತ್ತೀರಿ ಎಂದರೆ ತಾವು ಅಧ್ಯಕ್ಷ ಪೀಠದಿಂದ ಸಚಿವ ಪೀಠಕ್ಕೆ ಹೋಗುತ್ತಿದ್ದೀರಿ ಎನ್ನುವಂತಹ ಭರವಸೆಯನ್ನು ಕೊಡುತ್ತಿದ್ದಾರೆ. ಅದು ಇದ್ದರೆ ತಿಳಿಸಬೇಕು. ಈಗ ಅವರು ಸ್ಪಷ್ಟಪಡಿಸಬೇಕು.

ಶ್ರೀ ಶಿವಾನನಂದ ಹೆಚ್. ಕೌಜಲಗಿ : ಅದಕ್ಕೆ ದಯಮಾಡಿ ಹೇಳಬೇಕು. ಅಪ್ಲಿಕೇಷನ್ ತಯಾರಾಗುವುದಕ್ಕೆ 6 ಸಾವಿರ ರೂಪಾಯಿ ಖರ್ಚಾಗಿದೆ. ಇದನ್ನು ಯಾರು ಕೊಡುತ್ತಾರೆ. ನೀವು ಮುಂದೆ ಕಾರ್ಪೊರೇಷನ್ನಲ್ಲಿ ಕೊಡಿಸುತ್ತೇವೆ ಎಂದು ಹೇಳುತ್ತೀರಿ. ಬಡವರವೆಲ್ಲಾ 6-6 ಸಾವಿರ ರೂಪಾಯಿ ಹೋಗಿರುತ್ತದೆ. ಮತ್ತೇ ಒಂದು ಕಡೆ ಹರಿಜನ ಗಿರಿಜನರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತೀರಿ, ಆದರೆ ಒಬ್ಬ ಹರಿಜನರನ್ನೂ ಸಹ ಯಾರೂ ಉದ್ಧಾರಮಾಡುವುದಿಲ್ಲ. ನೀವು ಎಷ್ಟು ದಿವಸದೊಳಗೆ ಸಾಲ ಕೊಡಿಸುತ್ತೀರಿ ಎಂದು ಹೇಳಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಶಿವಾನಂದ ಕೌಜಲಗಿಯವರು ಪವರ್ ಲೂಮ್ ವಿಷಯವನ್ನೂ ಸಹ ಇವರಲ್ಲಿ ಸೇರಿಸುತ್ತಾರೆ. ಅವರು ಇಲ್ಲಿ ಸ್ವಲ್ಪ ತಪ್ಪು ಮಾಡುತ್ತಿದ್ದಾರೆ. ಈಗ ತಾವು ಏನು ಹಣಕಾಸು ಲಭ್ಯ ಮಾಡಿಸುತ್ತೀರ ಎನ್ನುವಂತಹ ಪ್ರಶ್ನೆ ಮಾಡಿದಿರಿ, ಕೆಎಸ್ಎಫ್ಸಿಯವರ ಜೊತೆಗೆ ನಾವು ವ್ಯವಹಾರ ಮಾಡಿ ಅವರಿಂದ ಸಾಲ ತೆಗೆದುಕೊಳ್ಳುತ್ತೇವೆ. ನಾವು ನೀವು ಇಬ್ಬರೂ ಕೂಡಿ ಆ ಉದ್ಯಮಶೀಲರನ್ನು ಸಾಕಷ್ಟು ತೊಂದರೆಗೆ ಹಾಕುತ್ತಿದ್ದೇವೆ. ನಬಾರ್ಡ್ ಹೊಸ ಯೋಜನೆಯೊಳಗಡೆ ಪವರ್ಲೂಮ್ಗಳಿಗೂ ಸಹ ಸಾಲ ಕೊಡತಕ್ಕಂತಹ ಯೋಜನೆ ಬಂದಿದೆ. ಅದು ಕನ್ಸಲ್ಟೀವ್ ಫೈನಾನ್ಸ್ ಇದೆ. ಕೆಎಸ್ಎಫ್ಸಿಯವರು ಒಂದು ವೇಳೆ ತಕ್ಷಣ ಮಂಜೂರು ಮಾಡುವುದಕ್ಕೆ ಏನಾದರೂ ತೊಂದರೆ ಇದ್ದರೆ ನಬಾರ್ಡ್ನಲ್ಲಿ ನಾವು ತೀವ್ರವಾಗಿ ಹಣಕಾಸಿನ ವ್ಯವಸ್ಥೆ ಮಾಡತಕ್ಕಂತಹ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ನಾನು ಈಗಾಗಲೇ ಪ್ರಸ್ತಾಪ ಮಾಡಿದ ಹಾಗೆ 9-2-93 ರಿಂದ ಪವರ್ಲೂಮ್ ಡೆವಲಪ್ಮೆಂಟ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳಿದೆ. ಆದರೆ ಇದು 9-2-94ರಂದು ಅಸ್ತಿತ್ವಕ್ಕೆ ಬಂದು, ಮೊನ್ನೆ ತಾನೇ ರಿಜಿಸ್ಟರ್ ಆಗಿದೆ. ಅದರ ಕೆಲಸ ತೀವ್ರವಾಗಿ ಆಗುತ್ತದೆ. ಆಗ ವಿನೇನು ನೀವು ಸಂಶಯ ಪಡುತ್ತಿದ್ದೀರಿ, ಏನು

ಆತಂಕ ವ್ಯಕ್ತಪಡಿಸುತ್ತಿದ್ದೀರಿ ಅದೆಲ್ಲಾ ದೂರವಾಗುತ್ತದೆ. ವಿದ್ಯುತ್ ಮಗ್ಗಗಳ ಅಭಿವೃದ್ಧಿ ಬಹಳಷ್ಟು ಸರಳವಾಗಿ ನಡೆಯುತ್ತದೆ ಎಂದು ಹೇಳುತ್ತೇನೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಟಿಯಿಂದ ಹಾನಿಗೀಡಾದ ಜಿಲ್ಲೆಗಳಿಗೆ ಕೇಂದ್ರದಿಂದ ನೆರವು ನೀಡಿರುವ ಬಗ್ಗೆ

180- ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್): ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಇತ್ತೀಚೆಗೆ ರಾಜ್ಯದ ಯಾವ ಯಾವ ಜಿಲ್ಲೆಗಳು ಅತಿವೃಷ್ಟಿಗೆ ಒಳಗಾದವು?*

ಆ) *ಈ ಜಿಲ್ಲೆಗಳಲ್ಲಿ ಆದ ನಷ್ಟದ ಬಗ್ಗೆ ಹಾಗೂ ಪ್ರಾಣ ಹಾನಿಯ ಬಗ್ಗೆ ಪರಿಹಾರ ಧನವನ್ನು ವಿತರಣೆ ಮಾಡಲಾಗಿದೆಯೇ?*

ಇ) *ಮಾಡಿದ್ದಲ್ಲಿ ಎಷ್ಟು ಮೊತ್ತದ ಪರಿಹಾರವನ್ನು ಸರ್ಕಾರವು ಬಿಡುಗಡೆ ಮಾಡಿದೆ?*
(ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) *ಇತ್ತೀಚೆಗೆ ಕೇಂದ್ರ ಸರ್ಕಾರದ ಉನ್ನತ ತಂಡವು ಈ ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ಕೇಂದ್ರಕ್ಕೆ ವರದಿ ಸಲ್ಲಿಸಿರುವುದು ನಿಜವಲ್ಲವೇ?*

ಉ) *ಈ ತಂಡದ ವರದಿಯ ನಂತರ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಂದ ಪರಿಹಾರದ ಮೊತ್ತವೆಷ್ಟು?*

ಊ) *ರಾಜ್ಯ ಸರ್ಕಾರವು ಎಷ್ಟು ಮೊತ್ತವನ್ನು ಕೋರಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು?*

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು) :

ಅ) ರಾಜ್ಯದ ಎಲ್ಲಾ 20 ಜಿಲ್ಲೆಗಳು.

ಆ) ಅತೀವೃಷ್ಟಿ ಮತ್ತು ನೆರೆಹಾವಳಿಯಿಂದ ಮೃತ ಹೊಂದಿದ ಎಲ್ಲಾ ಅರ್ಹ ಪ್ರಕರಣಗಳಲ್ಲಿ ಪರಿಹಾರ ನೀಡಲಾಗಿದೆ. ಮತ್ತು ಖಾಸಗಿ ಆಸ್ತಿ-ಪಾಸ್ತಿ ಕಳೆದುಕೊಂಡವರಿಗೆ ಪರಿಹಾರ ನೀಡುವ ಕಾರ್ಯ ಪ್ರಗತಿಯಲ್ಲಿದೆ.

ಇ) ಜಿಲ್ಲಾವಾರು ಬಿಡುಗಡೆ ಮಾಡಿದ ಹಣದ ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಿದೆ.

ಈ) ಹೌದು

ಉ) ಇದುವರೆಗೂ ಯಾವುದೇ ಪರಿಹಾರದ ಮೊತ್ತ ಬಂದಿಲ್ಲ.

ಊ) ರಾಜ್ಯ ಸರ್ಕಾರವು ರೂ. 200.00 ಕೋಟಿಗಳ ಕೇಂದ್ರದ ಸಹಾಯವನ್ನು ಕೋರಿ ಮನವಿಯನ್ನು ಸಲ್ಲಿಸಿತ್ತು.